# ಪರೀಕ್ಷೆ ಎದುರಿಸುವುದು ಹೇಗೆ?

ಭಾರತದ ಪ್ರತಿಷ್ಠಿತ ಹಾಗೂ ಕಠಿಣ ಪರೀಕ್ಷೆ ನಾಗರಿಕ ಸೇವಾ ಪರೀಕ್ಷೆ. ಪ್ರತಿವರ್ಷ ಸುಮಾರು 11 ಲಕ್ಷ ಮಂದಿ ಬರೆಯುವ ಈ ಪರೀಕ್ಷೆಯಲ್ಲಿ ಅಂತಿಮ ರ್‍ಯಾಂಕ್ ಪಟ್ಟಿಯಲ್ಲಿ ಸ್ಥಾನ ಪಡೆಯುವವರು ಕೇವಲ ಸಾವಿರ ಮಂದಿ. ನಂತರ ಅದರಲ್ಲೂ ಐಎಎಸ್ – ಐಪಿಎಸ್ ತರಹದ ಹುದ್ದೆಗಳಿಗೆ ಆಯ್ಕೆಯಾಗುವವರು ಕೇವಲ 200–300 ಜನ.

ಪದವಿ ಶಿಕ್ಷಣ ಪಡೆಯುತ್ತಿರುವ ಅಥವಾ ಪದವಿ ಮುಗಿಸಿದ 21 ರಿಂದ 32 ವರ್ಷದೊಳಗಿನ (ಇತರೆ ಹಿಂದುಳಿದ ವರ್ಗದವರು 35ನೇ ವಯಸ್ಸಿನವರೆಗೆ 9 ಬಾರಿ ಪರೀಕ್ಷೆ ಬರೆಯಬಹುದು. ಪರಿಶಿಷ್ಟಜಾತಿ/ಪಂಗಡದವರಿಗೆ ಪರೀಕ್ಷೆ ಬರೆಯಲು ಮಿತಿ ಇಲ್ಲ. ಆದರೆ 37ನೇ ವಯಸ್ಸಿನ ನಂತರ ಪರೀಕ್ಷೆ ಬರೆಯುವಂತಿಲ್ಲ) ಅಭ್ಯರ್ಥಿಗಳು ಒಟ್ಟು ಆರು ಬಾರಿ ಪರೀಕ್ಷೆ ಬರೆಯಲು ಅವಕಾಶವಿದೆ. ಭಾರತ, ನೇಪಾಳ, ಭೂತಾನ್, ಜನವರಿ 1, 1962ಕ್ಕೂ ಮುಂಚೆ ಭಾರತಕ್ಕೆ ಬಂದು ಇಲ್ಲಿಯೇ ಶಾಶ್ವತವಾಗಿ ನೆಲೆಸಿರುವ ಟಿಬೆಟಿಯನ್ ನಿರಾಶ್ರಿತರು, ಭಾರತ ಮೂಲದವರಾಗಿದ್ದು ಇಥಿಯೋಪಿಯಾ, ಕೀನ್ಯಾ, ಮಲಾವಿ, ಮಯನ್ಮಾರ್, ಪಾಕಿಸ್ತಾನ, ಶ್ರೀಲಂಕಾ, ತಾಂಜೇನಿಯಾ, ಉಗಾಂಡಾ, ವಿಯೆಟ್ನಾಂ, ಜಾಯ್ರೆ, ಜಾಂಬಿಯಾದಿಂದ ವಲಸೆ ಬಂದು ಇಲ್ಲಿಯೇ ಶಾಶ್ವತವಾಗಿ ನೆಲೆಸುವ ಉದ್ದೇಶ ಹೊಂದಿರುವ ಪ್ರಜೆಗಳು ಈ ಪರೀಕ್ಷೆ ತೆಗೆದುಕೊಳ್ಳಲು ಅರ್ಹರು. ಆದರೆ ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ (ಇಂಡಿಯನ್ ಫಾರಿನ್ ಸರ್ವಿಸ್) ಹುದ್ದೆಗಳು ಭಾರತದ ಪ್ರಜೆಗಳಿಗೆ ಮಾತ್ರ ಮೀಸಲು.

ಪರೀಕ್ಷೆಯು ಮೂರು ಹಂತಗಳನ್ನು ಹೊಂದಿರುತ್ತದೆ. ಪೂರ್ವಭಾವಿ ಪರೀಕ್ಷೆ (ಪ್ರಿಲಿಮ್ಸ್), ಮುಖ್ಯ ಪರೀಕ್ಷೆ (ಮೇನ್ಸ್) ಮತ್ತು ಸಂದರ್ಶನ ಈ ಮೂರು ಹಂತಗಳು. ಈ ಮೂರೂ ಹಂತಗಳನ್ನು ಮುಗಿಸಲು ಎರಡು ವರ್ಷಗಳೇ ಬೇಕಾಗುತ್ತವೆ.

## ಪೂರ್ವಭಾವಿ ಪರೀಕ್ಷೆ (ಪ್ರಿಲಿಮ್ಸ್)

ಇದು ಮೊದಲ ಹಂತ. ಸಾಮಾನ್ಯವಾಗಿ ಪ್ರತಿವರ್ಷ ಜೂನ್‌ನಲ್ಲಿ ಈ ಪರೀಕ್ಷೆ ನಡೆಯುತ್ತದೆ ಮತ್ತು ಆಗಸ್ಟ್‌ನಲ್ಲಿ ಫಲಿತಾಂಶ ಬರುತ್ತದೆ. ಇದನ್ನು ಫಸ್ಟ್ ಫಿಲ್ಟರ್ ಅಥವಾ ಸ್ಕ್ರೀನಿಂಗ್ ಟೆಸ್ಟ್ ಎನ್ನುತ್ತಾರೆ. ಇದರಲ್ಲಿ ತಲಾ ಎರಡು ತಾಸಿನ ವಸ್ತುನಿಷ್ಠ (objective) ಮಾದರಿಯ ಎರಡು ಪತ್ರಿಕೆಗಳಿರುತ್ತವೆ. ಇಲ್ಲಿ ಪಡೆಯುವ ಅಂಕಗಳನ್ನು ಮುಂದಿನ ಹಂತದ ಪರೀಕ್ಷೆಯ ರ್‍ಯಾಂಕಿಂಗ್‌ಗೆ ಪರಿಗಣಿಸುವುದಿಲ್ಲ. ಆದರೂ ಎರಡೂ ಪತ್ರಿಕೆಗಳನ್ನು ಕಡ್ಡಾಯವಾಗಿ ಪಾಸ್ ಮಾಡಲೇಬೇಕು. ಮುಖ್ಯ ಪರೀಕ್ಷೆ (ಮೇನ್ಸ್) ವಿಸ್ತೃತದ ಉತ್ತರ ಬರೆಯುವ (ಡಿಸ್ಕ್ರಿಪ್ಟಿವ್) ಮಾದರಿಯದಾಗಿದ್ದು ಒಟ್ಟು ಒಂಬತ್ತು ಪತ್ರಿಕೆಗಳಿಗೆ ಉತ್ತರಿಸಬೇಕು.

ಪ್ರಿಲಿಮ್ಸ್‌ನ ಮೊದಲ ಪತ್ರಿಕೆ ಜನರಲ್ ಸ್ಟಡೀಸ್ ಅಥವಾ ಸಾಮಾನ್ಯ ಅಧ್ಯಯನ. ಎರಡನೆಯದನ್ನು ಸಿಎಸ್‌ಎಟಿ (ಸಿವಿಲ್ ಸರ್ವಿಸಸ್ ಆಪ್ಟಿಟ್ಯೂಡ್ ಟೆಸ್ಟ್) ಎನ್ನುತ್ತಾರೆ. ಎರಡೂ ಪ್ರಶ್ನೆ ಪತ್ರಿಕೆಗಳು ವಸ್ತುನಿಷ್ಠ ಮಾದರಿಯಲ್ಲಿರುತ್ತವೆ. ಒಂದೊಂದೂ ಪತ್ರಿಕೆಯೂ 200 ಅಂಕದ್ದಾಗಿದ್ದು ಎರಡು ಗಂಟೆಗಳ ಅವಧಿಯಲ್ಲಿ

ಅಭ್ಯಾಸದಲ್ಲಿ ಯಾವಾಗಲೂ ಮುಂದಿದ್ದ ಆಕೆ, ಬಯೋಕೆಮಿಸ್ಟ್ರಿಯಲ್ಲಿ ಕೇರಳ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದವರು. ತಾವು ಕೆಲಸ ಮಾಡುತ್ತಿದ್ದ ಪೊಲೀಸ್ ಮುಖ್ಯ ಕಚೇರಿಯಲ್ಲಿ ಹಿರಿಯ ಅಧಿಕಾರಿಗಳಿಂದ ಪ್ರೇರಣೆಯೂ ಸಿಕ್ಕಿತು ಎಂದು ಮಿನ್ನು ಹೇಳುತ್ತಾರೆ. ಮಿನ್ನು ಅವರ ಪತಿ ಜೋಶಿ ಡಿ.ಜೆ. ಅವರು ಇಸ್ರೊದಲ್ಲಿ ಕೆಲಸ ಮಾಡುತ್ತಾರೆ.

‘ನನ್ನ 22ನೇ ವರ್ಷದಲ್ಲಿ ನಾನು ವಿದ್ಯಾಭ್ಯಾಸವನ್ನು ಸಂಪೂರ್ಣವಾಗಿ ನಿಲ್ಲಿಸಿದೆ. ಆಮೇಲೆ ಕೆಲಸಕ್ಕೆ ಸೇರಿದೆ. ನಿದ್ದೆಯೆಂದರೆ ನನಗೆ ಪಂಚಪ್ರಾಣ. ಎಲ್ಲಿಯೇ ಒಂದು ಹಾಸಿಗೆ ಹಾಸಿ ಕೊಟ್ಟರೂ ತಕ್ಷಣ ಮಲಗಿ ನಿದ್ದೆ ತೆಗೆಯುವಷ್ಟು ನಾನು ನಿದ್ರಾದೇವಿಯ ಭಕ್ತೆ. ಹಾಗೆಯೇ ಸೋಮಾರಿತನವೂ ನನ್ನ ಮೈದುಂಬಿಕೊಂಡಿತ್ತು. ಇಂಗ್ಲಿಷ್ ಎಷ್ಟೊಂದು ಕಬ್ಬಿಣದ ಕಡಲೆ ಆಗಿತ್ತು ಎಂದರೆ ‘ದಿ ಹಿಂದೂ’ ಪತ್ರಿಕೆಯನ್ನು ಡಿಕ್ಷನರಿ ಸಹಾಯದಿಂದ ಓದಲು ನನಗೆ ಪ್ರತಿದಿನ ಮೂರು ಗಂಟೆಗಳೇ ಬೇಕಾಗುತ್ತಿದ್ದವು. ಆದರೆ, ಯಶಸ್ಸಿನ ಹಂಬಲದಿಂದ ನನ್ನ ಆಟಿಟ್ಯೂಡ್ ಅನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡೆ’ ಎಂದೆನ್ನುವ ಮಿನ್ನು ಅವರ ಮಾತುಗಳಲ್ಲಿ ಯುವ ಆಕಾಂಕ್ಷಿಗಳಿಗೆ ಹಲವು ಪಾಠಗಳಿವೆ.



## ಇನ್ನಷ್ಟು ಪ್ರೇರಣೆದಾಯಕ ಕಥೆಗಳು

ಯುಪಿಎಸ್‌ಸಿ ಪರೀಕ್ಷೆಯಲ್ಲಿ 291ನೇ ರ್‍ಯಾಂಕ್ ಪಡೆಯುವ ಮೂಲಕ ಯಶಸ್ಸಿನ ಮಂದಹಾಸ ಬೀರಿದ ಕೆ.ಆರ್. ಕಲ್ಪಶ್ರೀ ಕೂಡ ಶಿರಾ ಪಟ್ಟಣದವರೇ. ಆ ಲೆಕ್ಕದಲ್ಲಿ ಶಿರಾ ಪಾಲಿಗೆ ಈ ಸಲ ಡಬಲ್ ಧಮಾಕಾ. ಕಲ್ಪಶ್ರೀ ಅವರದೂ ಅದೇ ಮಾತು. ‘ಗ್ರಾಮೀಣ ಶಾಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ತಂತ್ರಜ್ಞಾನ ಆಧಾರಿತ, ಇಂಟರ್ನೆಟ್, ಸ್ಮಾರ್ಟ್ ಬೋರ್ಡ್ ಒಳಗೊಂಡ ಉತ್ತಮ ಬೋಧನಾ ಸಾಮಗ್ರಿ ಪೂರೈಸುವ ಕೆಲಸ ಮಾಡಬೇಕು. ಅವಕಾಶ ದೊರೆತರೆ ಗ್ರಾಮಾಂತರ ಪ್ರದೇಶದ ಶಾಲೆಗಳಲ್ಲಿ ಶಿಕ್ಷಣದ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ’ ಎಂದು ಅವರು ಹೇಳುತ್ತಾರೆ. ಗ್ರಾಮಾಂತರ ಭಾಗದ ಅಭ್ಯರ್ಥಿಗಳು ಮನಸ್ಸು ಮಾಡಿ ಕಠಿಣ ಶ್ರಮ ಹಾಕಿದರೆ ಯಶಸ್ಸು ಕಷ್ಟವಲ್ಲ ಎಂದು ಭರವಸೆಯ ಮಾತುಗಳನ್ನೂ ಅವರು ಆಡುತ್ತಾರೆ.

## ಚಿಮ್ಮಿದ ಯಶಸ್ಸಿನ ಕಾರಂಜಿ

ರಾಜ್ಯದ ಟಾಪರ್ಸ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವವರು ಅಖಿಲ ಭಾರತ ರ್‍ಯಾಂಕಿಂಗ್‌ನ ಪಟ್ಟಿಯಲ್ಲಿ 31ನೇ ಸ್ಥಾನದಲ್ಲಿರುವ ಅವಿನಾಶ್ ವಿ. ರಾವ್ ಅವರು. ದಾವಣಗೆರೆಯ ಈ ಹುಡುಗ,